ನಿರ್ದೇಶಕರ ಕಛೇರಿ
ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22864212.
ಫ್ಯಾಕ್ಸ್: 080-22863618.
Email: directorgokdom@gmail.com
Web: www.gokdom.kar.nic.in
20ನೇ ಮಹಡಿ, ವಿ.ವಿ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂಖ್ಯೆ:- ಅಸಂನಿ/ವಿ.ವೇ/ಇಡಿಎನ್/ಸಿಆರ್-03/2021-22 ದಿನಾಂಕ: 06.12.2021

**ಅತಿ ಜರೂರು**

ಗೆ,
ರಿಜಿಸ್ಟ್ರಾರ್/ಡೀನ್
ALL CONCERNED ವಿಶ್ವವಿದ್ಯಾಲಯ
---------------- ಜಿಲ್ಲೆ

ವಿಷಯ:- ಭಾರತ ಸರ್ಕಾರದ ಅಲ್ಪಸಂಖ್ಯಾತರ ವ್ಯವಹಾರಗಳ ಮಂತ್ರಾಲಯ -Ministry of Minority Affairs-GoI ಅನುಷ್ಠಾನಗೊಳಿಸಲಾಗುತ್ತಿರುವ ರಾಷ್ಟ್ರ ವಿದ್ಯಾರ್ಥಿವೇತನ ಪೋರ್ಟಲ್ 2021-22 (National Scholarship Portal-NSP) ನ ಅಡಿಯಲ್ಲಿ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಮೆಟ್ರಿಕ್-ನಂತರ ಮತ್ತು ಮೆರಿಟ್-ಕಮ್-ಮೀನ್ಸ್ ವಿದ್ಯಾರ್ಥಿವೇತನದ ಅರ್ಜಿಗಳ ಪರಿಶೀಲನೆ ಕುರಿತು.

ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಪ್ರಕ್ರಿಯೆಯಲ್ಲಿ ತಮ್ಮ ವಿಶ್ವವಿದ್ಯಾಲಯದ ಎಲ್ಲಾ ಹಂತದ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸಹಕರಿಸಿ ಮತ್ತು ಸಮಯಕ್ಕೆ ತಕ್ಕನಾಗಿ ಕೆಲಸ ನಿರ್ವಹಿಸಿರುವುದರಿಂದ ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗಿ ವಿದ್ಯಾರ್ಥಿಗಳು ಅವರ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಹಾಯ ಮಾಡಿರಿವುದು ಶ್ಲಾಘನೀಯ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಭಾರತ ಸರ್ಕಾರದ ಅಲ್ಪಸಂಖ್ಯಾತರ ವ್ಯವಹಾರಗಳ ಮಂತ್ರಾಲಯ ( Ministry of Minority Affairs- Government of India) ವಿಧಿಸಿರುವ ನಿಯಮಾನುಸಾರ ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ 2021-22 ನೇ ಸಾಲಿನ ರಾಷ್ಟ್ರ ವಿದ್ಯಾರ್ಥಿವೇತನ ಪೋರ್ಟಲ್ (National Scholarship Portal-NSP) ನ ಮೆಟ್ರಿಕ್- ನಂತರ ಮತ್ತು ಮೆರಿಟ್-ಕಮ್-ಮೀನ್ಸ್ ವಿದ್ಯಾರ್ಥಿವೇತನದ ಅರ್ಜಿಗಳನ್ನು ಆನಲೈನ್ ಮೂಲಕ ಸಲ್ಲಿಸುವ ಪ್ರಕ್ರಿಯೆಯು ಜಾರಿಯಲ್ಲಿದ್ದು , ಸಲ್ಲಿಕೆಯಾದ ಅರ್ಜಿಗಳನ್ನು ಕಾಲೇಜು/ಶೈಕ್ಷಣಿಕ ಸಂಸ್ಥೆ ಹಂತದಲ್ಲಿ ಕಾಲೇಜು/ಶೈಕ್ಷಣಿಕ ಸಂಸ್ಥೆ ಪ್ರಾಂಶುಪಾಲರು ಅಥವ Institute Nodal Officer-INO-ರವರು ಕೆಳಕಂಡ ನಿಯಮಗಳನ್ವಯ ಪರಿಶೀಲಿಸಿ **ಆನ್‌ಲೈನ್ ಮುಖಾಂತರ** ಮುಂದಿನ ಹಂತಕ್ಕೆ ಸಲ್ಲಿಸಲು ತಮ್ಮ ಅಧೀನದಲ್ಲಿರುವ ಕಾಲೇಜುಗಳಿಗೆ ಸೂಚಿಸಲು ಈ ಮೂಲಕ ತಿಳಿಸಲಾಗಿದೆ.

**ನಿಯಮಗಳು:-**

1. ವಿದ್ಯಾರ್ಥಿಗಳು ಅಲ್ಪಸಂಖ್ಯಾತರ ( ಮುಸ್ಲಿಂ, ಕ್ರೈಸ್ತ , ಬುದ್ಧ , ಜೈನ್ , ಸಿಖ್ , ಪಾರ್ಸಿ) ಸಮುದಾಯಕ್ಕೆ ಸೇರಿರಬೇಕು.
2. ಕರ್ನಾಟಕ ರಾಜ್ಯದವರಾಗಿರಬೇಕು.
3. ಕುಟುಂಬದ ವಾರ್ಷಿಕ ಆದಾಯದ ಮಿತಿಯು **ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ** ಎರಡು ಲಕ್ಷ ಅಥವ ಅದಕ್ಕಿಂತ ಕಡಿಮೆ ಮೊತ್ತ ಮತ್ತು ಮೆರಿಟ್-ಕಮ್-ಮೀನ್ಸ್ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಎರಡುವರೆ ಲಕ್ಷ ಅಥವ ಅದಕ್ಕಿಂತ ಕಡಿಮೆ ಮೊತ್ತವಿರಬೇಕು.

ಮು.ತಿ.ನೋ

4. <u>ಮೆಟ್ರಿಕ್-ನಂತರದ ವಿದ್ಯಾರ್ಥಿಗಳು</u> ಹಿಂದಿನ ವಾರ್ಷಿಕ ಪರೀಕ್ಷೆ/ಸೆಮಿಸ್ಟರ್‌ನಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕು. (2021-22ನೇ ಸಾಲಿಗೆ ಹಿಂದಿನ ಪರೀಕ್ಷೆಯಲ್ಲಿ ಶೇ.50 ಅಂಕಗಳು ಪಡೆದಿರಬೇಕೆಂಬ ನಿಯಮ ಅನ್ವಯಿಸುವುದಿಲ್ಲ).

5. <u>ಮೆರಿಟ್-ಕಮ್-ಮೀನ್ಸ್ ನಲ್ಲಿ ನೂತನವಾಗಿ ಅರ್ಜಿ</u> ಸಲ್ಲಿಸುವ ವಿದ್ಯಾರ್ಥಿಗಳು ಹಿಂದಿನ ವಾರ್ಷಿಕ ಪರೀಕ್ಷೆ/ಸೆಮಿಸ್ಟರ್‌ನಲ್ಲಿ ಶೇ.50 ಅಥವ ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರಬೇಕು ಹಾಗೂ <u>ನವೀಕರಣ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು</u> ಹಿಂದಿನ ವಾರ್ಷಿಕ ಪರೀಕ್ಷೆ/ಸೆಮಿಸ್ಟರ್‌ನಲ್ಲಿ ಕೇವಲ ಉತ್ತೀರ್ಣರಾಗಿರಬೇಕು.

6. ಎಲ್ಲಾ ಪ್ರಾಂಶುಪಾಲರು ಅಥವ Institute Nodal Officer-INO-ರವರು ಅವರ ಕಾಲೇಜಿನಿಂದ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳ ಅರ್ಜಿಯ ಪ್ರತಿಯನ್ನು ಹಾಗೂ ಅರ್ಜಿಯೊಂದಿಗೆ ಸಲ್ಲಿಸಿರುವ ದಾಖಲೆಗಳನ್ನು (Application Hard copy and the documents enclosed) ತಮ್ಮಲ್ಲಿ ಕಾಪಿಟ್ಟುಕೊಳ್ಳುವುದು.

(ವಿದ್ಯಾರ್ಥಿಗಳು ತಮ್ಮ ಅರ್ಜಿಯ ಪ್ರತಿಯನ್ನು ಅಲ್ಪಸಂಖ್ಯಾತರ ಇಲಾಖೆಯ ಯಾವುದೇ ಕಛೇರಿಗೆ ಸಲ್ಲಿಸುವ ಅವಶ್ಯಕತೆಯಿರುವುದಿಲ್ಲ)

ಸಲ್ಲಿಕೆಯಾದ ಅರ್ಜಿಗಳ ಪರಿಶೀಲನೆಗೆ ಸಂಬಂಧಿಸಿದ USER MANUAL ಅನ್ನು ಇಲಾಖೆಯ ಜಾಲತಾಣ *https://www.dom.karnataka.gov.in* ದಲ್ಲಿ ಪ್ರಕಟಿಸಲಾಗಿದೆ ಮತ್ತು ಈ ಪತ್ರದೊಂದಿಗೆ ಲಗ್ಗತ್ತಿಸಲಾಗಿದೆ.

ರಾಷ್ಟ್ರ ವಿದ್ಯಾರ್ಥಿವೇತನ ಪೋರ್ಟಲ್ (NSP) ಪ್ರಕ್ರಿಯೆಯು ಸಮಯಬದ್ಧವಾಗಿರುವುದರಿಂದ ಯಾವುದೇ ಕಾರಣಕ್ಕೂ ವಿಳಂಬ ಮಾಡದೆ ಆದ್ಯತೆಯ ಮೇರೆಗೆ ಪ್ರಕ್ರಿಯೆಯನ್ನು ಪೂರೈಸಲು ಸೂಚಿಸಲಾಗಿದೆ.ತಪ್ಪಿದಲ್ಲಿ ನಿಮ್ಮ ತಾಲೂಕಿನ ಅರ್ಹ ವಿದ್ಯಾರ್ಥಿಗಳು ವಿದ್ಯಾರ್ಥಿವೇತನದಿಂದ ವಂಚಿತರಾಗುತ್ತಾರೆ.

**ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ನಿರ್ದೇಶನಾಲಯವನ್ನು ಸಂಪರ್ಕಿಸುವುದು.**
**<u>ಮೊಬೈಲ್ ಸಂಖ್ಯೆ:- ಶ್ರೀಮತಿ. ಆಯೇಷಾ ಫಿರ್ದೋಸ್:-+91-9731416943</u>**

**<u>ಯೋಜನೆಗೆ ಸಂಬಂಧಿಸಿದ ಮಾರ್ಗಸೂಚಿಗಾಗಿ ಮತ್ತು ಇತರೆ ಮಾಹಿತಿಗಾಗಿ *https://www.dom.karnataka.gov.in* ಗೆ ಬೇಟಿ ನೀಡುವುದು.</u>**

ನಿರ್ದೇಶಕರು 6/12
ಅಲ್ಪಸಂಖ್ಯಾತರ ನಿರ್ದೇಶನಾಲಯ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಬೆಂಗಳೂರು

<u>ಲಗ್ಗತ್ತುಗಳು:-</u>

1. Procedure on how to apply for NSP Scholarship.
2. How to do verification of NSP application from the Institute?
3. How to obtain Login credentials for college?

ಪ್ರತಿಯನ್ನು:-

1. ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ---------------- ಜಿಲ್ಲೆ.

No. NITK/Academic/2021-22/E4 Date: 08.12.2021

To,

The Chairman CCC kindly arrange to upload in the Institute Website for the information of the respective students.

Assistant Registrar (Academic)
National Institute of Technology
Karnataka, Surathkal
Srinivasnagar, Mangalore-575025

Asst. Registrar (Academic)